A.—Smt. YASHODARA DASAPPA (Minister for Social Welfare).—

(*a*) Yes.

(*b*) No.

(*c*) Does not arise in view of the answer to (*b*).

(*d*) Do

(*e*) Do

ಶ್ರೀ ಆರ್. ಕೆಂಚಪ್ಪ.—ಕಟ್ಟಡ ಇಲ್ಲದೇ ಇರುವುದು ಗೊತ್ತಿದೆಯೇ ? ಅಂದಾಜು ವೆಚ್ಚ ಎಷ್ಟು ಎಂದು ಕೇಳಿರುವುದಕ್ಕೆ ಗೊತ್ತಿಲ್ಲ ಎಂದು ಹೇಳಿದ್ದೀರಿ. ಅಸಿಸ್ಟೆಂಟ್ ಇಂಜನಿಯರು ಈ ಕಟ್ಟಡಕ್ಕೆ 35 ಸಾವಿರ ರೂಪಾಯಿ ಎಸ್ಟಿಮೇಟ್ ಮಾಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

†ಶ್ರೀಮತಿ ಯಶೋಧರ ದಾಸಪ್ಪ.—ಹಿಂದೆ ಇದ್ದ ಮಿನಿಸ್ಟರು 1960ರಲ್ಲಿ ಅಲ್ಲಿ ಕಟ್ಟಡ ಆಗಬೇಕು ಎಂದು ಹೇಳಿ ಜಾಗ ಗೊತ್ತುಮಾಡಿ ಅಂದಾಜನ್ನು ಕಳುಹಿಸಿ ಎಂದು ಹೇಳಿದ್ದರು. ಆ ರೀತಿ ಕಳುಹಿಸಿದ್ದರು. ಈಗ ಸರ್ಕಾರದವರು ನಿರ್ದೇಶನ ತೆಗೆದುಕೊಂಡಿಲ್ಲ ಎಂದು ಹೇಳಿದ್ದೇನೆ ಅಷ್ಟೆ.

ಶ್ರೀ ಆರ್ ಕೆಂಚಪ್ಪ.—ಅಲ್ಲಿ ಕಟ್ಟಡದ ಅಭಾವ ಬಹಳವಾಗಿರುವುದರಿಂದ ಆದಷ್ಟು ಬೇಗ ಈ ಕಟ್ಟಡ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಕಟ್ಟಡದ ಅಭಾವ ಇದೆ. ಹಾಸ್ಟೆಲುಗಳಿಗೆ ಬೇಡಿಕೆ ಬೇಕಾದಷ್ಟು ಬರುತ್ತಾ ಇದೆ. ಆದರೆ ಅದಕ್ಕೆ ತಕ್ಕ ಕಟ್ಟಡಗಳನ್ನು ಕಟ್ಟಿಸಲು ಹಣ ಹೆಚ್ಚಾಗಿಲ್ಲದೇ ಇರುವುದರಿಂದ ಸದ್ಯಕ್ಕೆ ಸ್ವಂತ ಕಟ್ಟಡ ಕಟ್ಟಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಎಲ್. ಗೌಡ.—ಈಗ ಅಲ್ಲಿರತಕ್ಕ ಹಾಸ್ಟೆಲ್‌ನಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿದ್ದಾರೆ ?

ಶ್ರೀಮತಿ ಯಶೋಧರ ದಾಸಪ್ಪ.—60 ಜನ ವಿದ್ಯಾರ್ಥಿಗಳಿದ್ದಾರೆ. ಈಗ ಇರುವ ಮನೆ ಸಾಲದು ಎಂದರೆ ಇನ್ನೊಂದು ಬೇರೆ ಬಾಡಿಗೆ ಮನೆಗೆ ಹೋಗಬಹುದು.

ಶ್ರೀ ಕೆ. ಎಲ್. ರಂಗನಾಥ್.—ಕಟ್ಟಡ ಬೇಕು ಎಂದು ಅರ್ಜಿ ಕೊಟ್ಟದ್ದು ಯಾವಸಾಲಿನಲ್ಲಿ, ಎಸ್ಟಿಮೇಟ್ ಆದದ್ದು ಯಾವ ಸಾಲಿನಲ್ಲಿ ?

ಶ್ರೀಮತಿ ಯಶೋಧರ ದಾಸಪ್ಪ.—1960ನೇ ಸಾಲಿನಲ್ಲಿ 23ನೇ ಫೆಬ್ರವರಿಯಲ್ಲಿ ಒಂದು ಎಸ್ಟಿಮೇಟ್ ಪ್ಲಾನು ತಯಾರಾಗಿ ಬಂದಿತ್ತು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ವಿದ್ಯಾರ್ಥಿಗಳು ಇರುವ ಕಡೆ ಕಟ್ಟಡ ಇಲ್ಲ. 3-4 ಕಟ್ಟಡಗಳಿರುವ ಊರಿನಲ್ಲಿ ವಿದ್ಯಾರ್ಥಿಗಳಿಲ್ಲ. ಇದು ಯಾವ ತರಹದ ಪ್ಲಾನಿಂಗು ? ಉದಾಹರಣೆಗೆ ತುಮಕೂರು ಇಂಥಾಕಡೆ 4 ಹಾಸ್ಟಲುಗಳಿವೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ, ವಿದ್ಯಾರ್ಥಿಗಳಿದ್ದಕಡೆ ಹಾಸ್ಟೆಲ್ ಬಿಲ್ಡಿಂಗ್ ಇಲ್ಲ. ಇದು ಯಾವ ಪ್ಲಾನು, ಯಾರು ಅಂದಾಜು ಮಾಡಿದರು ?

ಶ್ರೀಮತಿ ಯಶೋಧರ ದಾಸಪ್ಪ.—ಬೆಂಗಳೂರಿನಂಥಾ ಸಿಟಿಯಲ್ಲಿ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಕಟ್ಟಡ ಕಟ್ಟಿಸುತ್ತೇವೆ. 5½ ಲಕ್ಷ ರೂಪಾಯಿ ತೆಗೆದಿಟ್ಟಿದ್ದೇವೆ. ಕಟ್ಟಡ ಇರುವ ಜಾಗದಲ್ಲಿ ಹುಡುಗರು ಇಲ್ಲ ಎಂದರೆ ಅವುಗಳನ್ನು ಜನರಲ್ ಹಾಸ್ಟೆಲ್ಸ್ ಆಗಿ ಪರಿವರ್ತಿಸಿದರೆ ಹುಡುಗರು ಬರುತ್ತಾರೆ, ಸರ್ಕಾರಕ್ಕೆ ಕಷ್ಟವೇನೂ ಆಗುವುದಿಲ್ಲ.

9-00 A.M.

Construction of four dams to a halla near Ankasandra village in Chikkanayakanahalli Taluk.

*Q—608. Sri C. H. LINGADEVARU (Chikkanayakanahalli).

Will the Government be pleased to state:—

(*a*) whether it is not a fact that estimates for the construction of four dams to a halla near Ankasandra Village, Handanakere Hobli, Chikkanayakanahalli Taluk, was prepared and if so, when it was prepared;

(*b*) the estimated cost of each one of them;

(*c*) when they have sanctioned the estimate and the stage at which the work is pending ?

A.—Sri ALUR HANUMANTHAPPA (Deputy Minister for Minor Irrigation).—

(*a*) Estimates for the construction of 4 Anes were prepared during 1960-61 and 1961-62.

(*b*) and (*c*)

Estimated cost.	*Date of sanction.*	*Stage*
Ane No. 1 Rs. 30,000.	Estimate not yet sanctioned.	...
Ane No. 2 Rs. 21,560.	do	...
Ane No. 3 Rs. 23,100.	28-11-1961	Work is under progress.
Ane No. 4 Rs. 35,750.	6-2-1963	Work will be started as soon as the agency for executing the work is fixed.

ಶ್ರೀ ಸಿ. ಎಚ್. ಲಿಂಗದೇವರು.—ಪ್ರಶ್ನೆಯ (ಬ) ಮತ್ತು (ಸಿ) ಭಾಗದಲ್ಲಿ ಈ ಅಂದಾಜುಗಳು 1960-61 ಮತ್ತು 1961-62ರಲ್ಲೇ ಮಂಜೂರಾಗಿದ್ದರೂ ಈ ಒಂದನೇ ನಂಬರ್ ಮತ್ತು ಎರಡನೇ ನಂಬರ್ ಆಣೆ ಕೆಲಸದ ಅಂದಾಜಿನ್ನೂ ಮಂಜೂರಾಗಿಲ್ಲ ಎಂತ ಹೇಗೆ ಹೇಳುತ್ತೀರಿ ?

† ಶ್ರೀ ಆಲೂರು ಹನುಮಂತಪ್ಪ.—3 ಮತ್ತು 4ನೇ ಆಣೆಗಳ ಸ್ಕೀಮನ್ನು ಮುಗಿದಿದೆ, ಮಂಜೂರಾಗಿವೆ. ಆದರೆ ಈ 1 ಮತ್ತು 2ನೇ ಆಣೆಗಳು due to change of site, the estimate is being revised.

ಶ್ರೀ ಸಿ. ಎಚ್. ಲಿಂಗದೇವರು.—ಈ ಜಾಗದಲ್ಲಿ ಒಂದು ಸಣ್ಣ ಕೆರೆ ಕಟ್ಟಬೇಕೆಂದು ರೈತರು ಸರ್ಕಾರದವರನ್ನು ಒತ್ತಾಯ ಪಡಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲಿ ಈಗ ಪಿಕಪ್ ಕಟ್ಟತಕ್ಕ ರಿಪೋರ್ಟು ಮಾತ್ರ ನನ್ನ ಮುಂದಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಅಲ್ಲಿ ಒಂದು ಸಣ್ಣ ಕೆರೆ ಕಟ್ಟತಕ್ಕ ವಿಚಾರದಲ್ಲಿ 4-5 ವರ್ಷಗಳ ಹಿಂದೆ ಅಂದಾಜು ಕೂಡ ತಯಾರಾಗಿ ಅದು ಸರ್ಕಾರದವರ ಮುಂದೆ ಪೆಂಡಿಂಗ್‌ನಲ್ಲಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಈಗ ತಾವು ಬಹುಶಃ ಆ ಲಿಂಗಸಂದ್ರದ ಬ್ರಿಡ್ಜ್ ಟ್ಯಾಂಕಿನ ವಿಚಾರವಾಗಿ ಕೇಳುತ್ತಿರಬಹುದು. ಆದರೆ ಆ ಕೆರೆಯನ್ನು ರೆಸ್ಟೋರ್ ಮಾಡಿದರೆ ಬೋರನ ಕಣಿವೆ ನೀರು ಸರಬರಾಯಿಗೆ ತೊಂದರೆ ಆಗಬಹುದಂತ ಈಗ ಇಲ್ಲಿ ನಾಲ್ಕು ಅಣಿಕಟ್ಟುಗಳನ್ನೇ ಮಾತ್ರ ಮಾಡಬೇಕೆಂಬ ಪ್ರಯತ್ನ ಮಾಡಲಾಗಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಆ ಲಿಂಗಸಂದ್ರ ಬ್ರೀಡ್ಜ್ ಟ್ಯಾಂಕ್ ಅಷ್ಟೇನೂ ದೊಡ್ಡ ಕೆರೆಯಲ್ಲ, ಅದು ಒಂದು ಕಟ್ಟೆ ಮಾತ್ರ. ಇದನ್ನು ರೆಸ್ಟೋರ್ ಮಾಡಲು ಈ ಹಿಂದೆಯೇ ಎಸ್ಟಿಮೇಟು ತಯಾರಾಗಿ ಸರ್ಕಾರದವರ ಮುಂದೆ ಪರಿಶೀಲನೆಯಲ್ಲಿದೆ ಎಂಬ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

Sri ALUR HANUMANTHAPPA.—Construction of these anicuts will not solve the problem of submersion. The first will bring under irrigation certain acreage—I do not have the exact figure, the second will bring nearly 180 acres, the third nearly 367 acres and the fourth about 108 acres.

ಶ್ರೀ ಸಿ. ಎಚ್. ಲಿಂಗದೇವರು.—ಈಗ ತಾವು ಹೇಳತಕ್ಕ ನಾಲ್ಕು ಆಣಗಳೇನಿವೆ ಅವುಗಳನ್ನು ಕಟ್ಟಿದರೆ ಯಾವ ಇರಿಗೇಷನ್ನಿಗೂ ಅವುಗಳಿಂದ ಪ್ರಯೋಜನವಾಗುವುದಿಲ್ಲ. ಆ ಕೆರೆಯನ್ನು ದುರಸ್ತಿ ಮಾಡಿದರೆ ಅದರಲ್ಲಿ ಹಿಡಿಸುವ ನೀರಿನ ಪ್ರಮಾಣ ಕೂಡ ಬಹಳ ಕಡಮೆಯೇ. 50-100 ಎಕರೆಗಳು ಸಾಗಾಗ ಬಹುದು. ಇದರಿಂದ ಬೋರನ ಕಣಿವೆ ಕೆರೆಗೆ ನೀರಿನ ತೊಂದರೆಯೇನೂ ಆಗುತ್ತಿಲ್ಲ ಎಂತ ಅಲ್ಲಿಯ ಜನರು ಸರ್ಕಾರದವರಲ್ಲಿ ಅರ್ಜಿ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಈ ಹಿಂದೆ ಒಂದಾವರ್ತಿ ಈ ಕೆರೆಯದುರಸಿ, ಬಗ್ಗೆ 21,500 ರೂಪಾಯಿಗಳಿಗೆ ಒಂದು ಅಂದಾಜಾಗಿತ್ತು. ಆನಂತರ ಆ ಸ್ಥಳವನ್ನು ಸೂಪರಿಂಟೆಂಡೆಂಟಿಂಗ್, ಇಂಜಿನಿಯರ್ ಅವರು ಹೋಗಿ ಪರಿಶೀಲನೆಮಾಡಿದನಂತರ ಆ ಎಸ್ಟಿಮೇಟು 1 ಲಕ್ಷಕ್ಕೇರಿಪ್ಪೈಜಾಯಿತು. 180 ಎಕರೆಗೆ ನೀರು ಸರಬರಾಯಿ ಆಗುತ್ತೆಂದು ಅಂದಾಜು ಮಾಡಿದ್ದರು. ಆದರೆ ನೀರು ಮಳುಗಡೆ ಜಾಸ್ತಿ ಆಗುತ್ತೆಂದು ನಿಲ್ಲಿಸಲಾಯಿತು.

ಶ್ರೀ ಸಿ. ಎಚ್. ಲಿಂಗದೇವರು.—ಆ ಕೆಲಸವನ್ನೇ ಮತ್ತೆ ಪರಿಶೀಲನೆಮಾಡಿ ಅಲ್ಲಿ ಕೆರೆ ಕಟ್ಟಿಸಲು ಪ್ರಾಗ್ರತೆ ಪ್ರಯತ್ನ ಪಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಪರಿಶೀಲನೆ ಮಾಡಲು ಅಭ್ಯಂತರವೇನೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ಅಚ್ಚುಕಟ್ಟಿನಲ್ಲಿ ಗಾರ್ಡನ್‌ಲ್ಯಾಂಡ್ ಆಗುತ್ತೋ ಪ್ಯಾಡಿ ಲ್ಯಾಂಡ್ ಆಗುತ್ತೋ ?

ಶ್ರೀ ಆಲೂರು ಹನುಮಂತಪ್ಪ.—ಗಾರ್ಡನ್ ಲಾಂಡ್ ಸೇರಿದ್ದರೂ ಸೇರಿರಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಇಂಡೈರೆಕ್ಟಾಗಿ ಅನುಕೂಲ ಮಾಡತಕ್ಕ ಕೆಲಸ ಮಾಡಬೇಡಿ. ಜನರೇನು ಕೇಳುತ್ತಾರೋ ಅದನ್ನು ಮಾಡಲು ತಮಗೇನು ತೊಂದರೆಯಿದೆ ?

ಶ್ರೀ ಆಲೂರು ಹನುಮಂತಪ್ಪ.—ಸರ್ಕಾರದವರು ಜನಗಳೇನು ಕೇಳುತ್ತಾರೋ ಆ ಪ್ರಪ್ರೋ ಜಲ್‌ಗಳನ್ನೇ ಮುಂದುವರಿಸುತ್ತಾರೆ.

ಶ್ರೀ ಕೆ. ಸಿ. ರೆವಣ್ಣಸಿದ್ದಪ್ಪ.—ಬೋರನ ಕಣಿವೆ ಕೆಳಗೆ ಸಾಕಾಗತಕ್ಕದ್ದೆಲ್ಲ 1,400 ಎಕರೆಗಳು ಮಾತ್ರ. ಈ ಸ್ಥಳದಲ್ಲಿ ಒಂದು ಸಣ್ಣ ಕೆರೆ ಕಟ್ಟಿದರೆ ಆ ಬೋರನ ಕಣಿವೆ ಕೆರೆನೀರಿಗೇನು ತೊಂದರೆಯಾಗುವುದಿಲ್ಲ. ಇಲ್ಲ ಅನೇಕ ಬಡ ಜನರಿಗೆ ಅನುಕೂಲವಾಗುತ್ತದೆ—ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಆ ಬೋರನ ಕಣಿವೆ ಕೆರೆಗೆ ಹೆಚ್ಚುನೀರಿನ ಸರಬರಾಯಿ ಆಗುತ್ತಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆ ವಿಚಾರವನ್ನು ಎಗ್ಜಾಮಿನ್ ಮಾಡಿಸಬೇಕಾಗಿದೆ. ಆ ಬೋರನ ಕಣಿವೆ ಕೆರೆಯಲ್ಲಿ 8352 ಯೂನಿಟ್ ನೀರು ಇರುತ್ತೆಂದು ಗೊತ್ತಾಗಿದೆ. ಆ ನೀರು 8600 ಎಕರೆಗಳಿಗೆ ಉಪಯೋಗವಾಗಬೇಕು. ಆದರೆ ಈಗ ಅಲ್ಲಿ 1,400 ಎಕರೆಗೆ ಮಾತ್ರ ನೀರು ಸರಬರಾಯಿ ಆಗುತ್ತಿದೆ. ಅದನ್ನು ಎಗ್ಜಾಮಿನ್ ಮಾಡಿಸ ಬೇಕಾಗಿದೆ. ಆದರೆ ಈಗ ಈ ವ್ಯಾಲಿಯಲ್ಲಿ 4 ಪಿಕಪ್‌ಗಳನ್ನು ಕಟ್ಟಿಸಿದರೆ ಆ ಕೆರೆಗೇನೂ ತೊಂದರೆಯಾಗುವುದಿಲ್ಲ—ಇದರಿಂದ ಹೆಚ್ಚಿಗೆ ಸಬ್‌ಮರ್ಷನ್ ಕೂಡ ಆಗುವುದಿಲ್ಲ. ಈ ನಾಲ್ಕು ಪಿಕಪ್‌ಗಳಿಂದಲೇ ನಾನಾಗಲೇ ಹೇಳಿದಂತೆ 700–800 ಎಕರೆಗೆ ನೀರು ಸರಬರಾಯಿ ಆಗುತ್ತೆ ಎಂತ ಈಗ ನನ್ನ ಮುಂದಿರತಕ್ಕ ಪೇಪರು ವರದಿ ಹೇಳುತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ತಾವೀಗ ಆ ಪೇಪರು ಮೇಲಿರತಕ್ಕ ವರದಿ ನೋಡಿಕೊಂಡು ಮಾತನಾಡುತ್ತಿದ್ದೀರಿ. ಯಾರೋ ಒಂದು ವರದಿಯನ್ನು ಬರೆದು ಕೊಟ್ಟಿದ್ದಾರೆ, ಅದನ್ನು ನೀವು ನೋಡಿಕೊಂಡು ಉತ್ತರ ಹೇಳುತ್ತಿದ್ದೀರಿ. ಆದರೆ ತಾವು ಆ ಜಾಗಕ್ಕೆ ಖುದ್ದಾಗಿ ಹೋಗಿ ಜನರ ತೊಂದರೆಗಳೇನು ಎಂಬುದನ್ನು ನೋಡಿ, ಅಲ್ಲಿ ಜನರೇನು ಹೇಳುತ್ತಾರೆಂಬುದನ್ನು ಕೇಳಿ ಈ ಕೆಲಸ ಗಳನ್ನು ಮಾಡಬೇಕೋ ಅಥವಾ ತಮ್ಮ ಮನಸ್ಸಿಗೆ ಬಂದಂತೆ ತಾವು ಮಾಡಬೇಕೋ ?

ಶ್ರೀ ಆಲೂರು ಹನುಮಂತಪ್ಪ.—ಅಗತ್ಯವೆಂದರೆ ನಾನೂ ಕೂಡ ಆ ಸ್ಥಳಕ್ಕೆ ಹೋಗಿ ನೋಡಿ ಕೊಂಡು ಬರುತ್ತೇನೆ. ಜನರನ್ನು ಖುದ್ದಾಗಿ ಕಂಡು ವಿಚಾರ ಮಾಡೇಮಾಡುತ್ತೇವೆ.

Restoration of Pemmaladevanahalli Tank in Chikkanayakanahalli Taluk.

*Q.—610. Sri C. H. LINGADEVARU (Chikkanayakanahalli).—

With the Government be pleased to state.—

(*a*) when the estimate for the restoration of Pemmaladevanahalli tank near Shettykere Hobli, Chikkanayakanahalli Taluk, was prepared ;

(*b*) ths estimated cost of the same ;

(*c*) the reasons for not commencing the work so far ?